ವಿಶಾಖ ಎನ್.

# ಯಶಸ್ಸಿನ ಅಲೆಯಲ್ಲಿ ಜೈಲರ್

ತಮಿಳುನಾಡು ಚಿತ್ರಮಂದಿರಗಳ ಮಾಲೀಕರ ಒಕ್ಕೂಟದ ಅಧ್ಯಕ್ಷ ತಿರುಪ್ಪೂರು ಸುಬ್ರಮಣಿಯನ್ ದೊಡ್ಡ ಉಸಿರನ್ನು ಹೊರಹಾಕಿದರು. ಅದರಲ್ಲಿ ತೃಪ್ತ ಭಾವವಿತ್ತು. 'ಜೈಲರ್' ತಮಿಳು ಸಿನಿಮಾ ಕಡಿಮೆ ಎಂದರೂ ₹400 ಕೋಟಿ ಕಲೆಹಾಕುವ ಎಲ್ಲ ಲಕ್ಷಣಗಳು ಅವರ ಇಂತಹ ಪ್ರತಿಕ್ರಿಯೆಗೆ ಕಾರಣ. ಮಿಶ್ರ ವಿಮರ್ಶೆಗಳ ಹೊರತಾಗಿಯೂ 'ಜೈಲರ್' ಈ ವರ್ಷ ಅತಿ ಹೆಚ್ಚು ಹಣ ತಂದಿತ್ತ ಸಿನಿಮಾ ಆಗಿ ಹೊರಹೊಮ್ಮಿದೆ. 'ಬೀಸ್ಟ್' ಚಿತ್ರದ ದಯನೀಯ ಸೋಲಿನಿಂದ ಕಂಗಾಲಾಗಿದ್ದ ನಿರ್ದೇಶಕ ನೆಲ್ಸನ್ ದಿಲೀಪ್‌ಕುಮಾರ್ ವೃತ್ತಿಬದುಕಿಗೆ ಈ ಯಶಸ್ಸು ಟಾನಿಕ್ ಆಗಿ ಒದಗಿಬಂದಿದೆ ಎಂದು ಸುಬ್ರಮಣಿಯನ್ ಸಿಕ್ಕಸಿಕ್ಕವರಲ್ಲೆಲ್ಲ ಹೇಳುತ್ತಿದ್ದಾರೆ.

'ಜೈಲರ್' ಸಿನಿಮಾದ ಗೆಲುವನ್ನು ಸಿನಿಮಾ ಪಂಡಿತರು ಬಗೆಬಗೆಯಾಗಿ ವಿಶ್ಲೇಷಿಸಲಾರಂಭಿಸಿದ್ದಾರೆ. ಶಿವರಾಜ್‌ಕುಮಾರ್, ವಿನಾಯಕನ್, ಮೋಹನ್‌ಲಾಲ್, ಸುನಿಲ್ ಹೀಗೆ ದಕ್ಷಿಣ ಭಾರತದ ಸಿನಿಮಾಗಳಲ್ಲಿ ಗುರುತಾಗಿರುವ ಹಲವು ಮುಖಗಳು ಚಿತ್ರದಲ್ಲಿ ಇದ್ದದ್ದು ಸಹಜವಾಗಿಯೇ ಪ್ರೇಕ್ಷಕರಲ್ಲಿ ಕುತೂಹಲವನ್ನು ಸೃಷ್ಟಿಸಿತ್ತು. ಸಣ್ಣದೊಂದು ಸಸ್ಪೆನ್ಸ್ ಎಳೆಯನ್ನು ಇಟ್ಟುಕೊಂಡೇ ಮನರಂಜನೆಗೆ ಮುಕ್ಕಾಗದಂತೆ, ಅದೂ ಎರಡಷ್ಟೆ ಪೂರ್ಣಪ್ರಮಾಣದ ಹಾಡುಗಳನ್ನು ಇಟ್ಟುಕೊಂಡು ಸಿನಿಮಾ ಮಾಡುವುದು ಕಷ್ಟ. ರಜನೀಕಾಂತ್ ಇದ್ದಮೇಲೆ ನಿರೀಕ್ಷೆ ಹೆಚ್ಚಾಗಿರುತ್ತದೆ. ಅದನ್ನೂ ಉಳಿಸಿಕೊಂಡು, ಹಾಸ್ಯರಸವನ್ನೂ ನೆಚ್ಚಿಕೊಂಡು ಸಿನಿಮಾ ನಿರ್ದೇಶಿಸುವ ಸವಾಲನ್ನು ನೆಲ್ಸನ್ ನಿಭಾಯಿಸಿದ್ದರು. ಅದಕ್ಕೆ ಈಗ ಗಳಿಕೆಯ ದೃಷ್ಟಿಯಿಂದ ಒಳ್ಳೆಯ ಫಲವಂತೂ ದೊರೆತಿದೆ. ■





ಸುಷ್ಮಿತಾ ಸೆನ್

# ಸುಷ್ಮಿತಾ ಹೊಸ ಇನಿಂಗ್ಸ್‌ನ 'ತಾಲಿ'

'ನಾನು ಅನುಭವಿಸುತ್ತಿರುವ ಸಂಕಟ ನೀನು ಅನುಭವಿಸಿದ್ದರ ಮುಂದೆ ಏನೇನೂ ಅಲ್ಲ' – ಹೀಗೆ ಒಬ್ಬ ಟ್ರಾನ್ಸ್‌ಜೆಂಡರ್ ಹೇಳುವಾಗ, ಶ್ರೀಗೌರಿ ಸಾವಂತ್ ಪಾತ್ರಧಾರಿ ಸುಷ್ಮಿತಾ ಸೆನ್ ಮುಖದ ಗೆರೆಗಳು ತುಸು ಅತ್ತಿತ್ತಲಾಗುತ್ತವೆ. 'ತಾಲಿ' ಹೆಸರಿನ ವೆಬ್ ಸರಣಿ 'ಜಿಯೊ' ಒಟಿಟಿಯಲ್ಲಿ ಪ್ರಸಾರವಾಗುತ್ತಿದ್ದು, ಅದರ ಝಲಕ್ ಇದು.

ಶ್ರೀಗೌರಿ ಸಾವಂತ್ ಕ್ವೀರ್ ಸಮುದಾಯದಲ್ಲಿ ದೊಡ್ಡ ಹೆಸರು. ಟ್ರಾನ್ಸ್‌ಜೆಂಡರ್‌ಗಳಿಗೆ ಮರಣಪತ್ರವೇ ಸಿಗುತ್ತಿರಲಿಲ್ಲ. 2014ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಿಂದಾಗಿ ಅದು ಸಾಧ್ಯವಾಯಿತು. ಅಂಥದೊಂದು ಹೋರಾಟಕ್ಕೆ ನಾಂದಿ ಹಾಡಿದ್ದೇ ಶ್ರೀಗೌರಿ. ಗಂಡು ಪಾತ್ರವೊಂದು ಹೆಣ್ಣಾಗುವ ಸೂಕ್ಷ್ಮವೂ ಸಂಕೀರ್ಣವೂ ಆದ ಪ್ರಕ್ರಿಯೆಯನ್ನು ವಸ್ತುವಿಷಯವಾಗಿಸಿಕೊಂಡ ಸಿನಿಮಾಗಳು ಬಂದಿವೆ. ಆದರೆ, ಶ್ರೀಗೌರಿ ತರಹದ ಹೋರಾಟಗಾರ್ತಿಯ ದಾವಾನಿಲ ತೆರೆದಿಡುವಂತಹ ಕಥನವೊಂದು ಯಾವ ತೆರೆಮೇಲೆ ಕೂಡ ಅನಾವರಣಗೊಂಡಿರಲಿಲ್ಲ. ಅರ್ಜುನ್ ಸಿಂಗ್ ಬರನ್ ಹಾಗೂ ಕಾರ್ತಿಕ್ ಡಿ. ನಿಶಾಂದರ್ ಅಂತಹ ಪ್ರಯತ್ನಕ್ಕೆ ಕೈಹಾಕಿ ಆರು ಕಂತುಗಳ ವೆಬ್ ಸರಣಿಯನ್ನು ಸೃಷ್ಟಿಸಿದ್ದರು. ಅವರ ಚಿತ್ರಕಥಾ ಹಂದರಕ್ಕೆ ಬರವಣಿಗೆಯ ರಕ್ತ ತುಂಬಿಸಿದವರು ಕ್ಷಿತಿಜ್ ಪಟವರ್ಧನ್. ಮರಾಠಿಯಲ್ಲಿ 'ನಟರಂಗ್' ತರಹದ ಕಾಡುವ ಸಿನಿಮಾ ಮಾಡಿದ ರವಿ ಜಾಧವ್ ಈ ವೆಬ್ ಸರಣಿಯನ್ನು ನಿರ್ದೇಶಿಸಿರುವುದು ವಿಶೇಷ. ಆತ್ಮಕಥಾ ವಸ್ತುಗಳನ್ನು ದೃಶ್ಯ ಮಾಧ್ಯಮಕ್ಕೆ ಒಗ್ಗಿಸುವುದರಲ್ಲಿ ರವಿ ಸಿದ್ಧಹಸ್ತರು. ಬಾಲಗಂಧರ್ವರ ಜೀವನಾಧಾರಿತವಾದ ಅವರ ನಿರ್ದೇಶನದ ಸಿನಿಮಾ ಅದಕ್ಕೆ ಸಶಕ್ತ ಉದಾಹರಣೆ.

ವೆಬ್ ಸರಣಿಯಲ್ಲಿ ಸುಶ್ಮಿತಾ ಸೆನ್ ಅಭಿನಯಿಸುವುದು ಮಾರುಕಟ್ಟೆ ದೃಷ್ಟಿಯಿಂದ ಅನುಕೂಲಕರ ಎಂದು ನಿರ್ದೇಶಕರು ಭಾವಿಸಿದ್ದರು. ಸ್ಕ್ರಿಪ್ಟ್ ಓದಿ ಅಸ್ತು ಎಂದು ಹೇಳಲು ಸುಷ್ಮಿತಾ ಆರು ತಿಂಗಳು ತೆಗೆದುಕೊಂಡಿದ್ದರು. ಸಾಮಾನ್ಯವಾಗಿ ಗಂಡಸರೇ ಟ್ರಾನ್ಸ್‌ಜೆಂಡರ್ ಪಾತ್ರಗಳನ್ನು ನಿರ್ವಹಿಸುವುದು ಹೆಚ್ಚು. ಅದಕ್ಕೆ ಅಪವಾದದಂತೆ ಕಂಡ ತಮ್ಮ ಆಯ್ಕೆಯ ವಿಷಯದಲ್ಲಿಯೇ ಸುಷ್ಮಿತಾ ಅವರಿಗೆ ಕೆಲವು ಗೊಂದಲಗಳಿದ್ದವು. 'ಬ್ರಾ ಹಾಕಿಕೊಳ್ಳುವ ದೃಶ್ಯವನ್ನು ಹೇಗೆ ಚಿತ್ರೀಕರಿಸುವಿರಿ' ಎನ್ನುವ ನೇರವಾದ ಪ್ರಶ್ನೆಯನ್ನೂ ಅವರು ನಿರ್ದೇಶಕರಿಗೆ ಹಾಕಿದ್ದರು. ಕೊನೆಗೆ ಈ ಪಾತ್ರಕ್ಕೆ ಒಪ್ಪಿ, ಶ್ರೀಗೌರಿ ಅವರೊಟ್ಟಿಗಿನ ಒಡನಾಟದಿಂದ ಹಲವು ಸಂಗತಿಗಳನ್ನು ಕಲಿತುಕೊಂಡಿದ್ದರು.

ಒಂದಿಷ್ಟು ಮೆಲೋಡ್ರಾಮಾಗಳು, ಗಣೇಶನಂತಹವನು ಗೌರಿಯಾಗಿ ಬದಲಾಗುವ ಪ್ರಕ್ರಿಯೆಯಲ್ಲಿ ಅನುಭವಿಸುವ ಯಾತನೆಗಳ ಸಿನಿಮೆಟಿಕ್ ದರ್ಶನ ಎಲ್ಲವನ್ನೂ ಒಳಗೊಂಡ 'ತಾಲಿ' ವೆಬ್ ಸರಣಿಯಲ್ಲಿ ಸುಷ್ಮಿತಾ ದೊಡ್ಡ ಹಣೆಬೊಟ್ಟೇ ಒಂದು ರೂಪಕ ಎಂದು ನಿರ್ದೇಶಕರು ನಂಬಿದ್ದಾರೆ. ಕೆಲವು ಕೊರೆಗಳ ನಡುವೆಯೂ ಕ್ವೀರ್ ಸಮುದಾಯದ ಒಳದನಿಗೆ ವೆಬ್ ಸರಣಿ ಕನ್ನಡಿ ಹಿಡಿಯುತ್ತದೆ. ■